ಕ್ರಿ:ಮಿಸ್:ನಂ.*449/2016*
ಪಿ.ಡಬ್ಲ್ಯೂ-*1*

**ದಿಃ *14-09-2021* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರಿದ ಪಾಟೀ ಸವಾಲು ಃ ಎದುರುದಾರರ ಪರ ವಕೀಲರಿಂದ**

ನನ್ನ ದೂರವಾಣಿ ಸಂಖ್ಯೆ *7348945872* ಎಂದರೆ ಸರಿ. ಸದರಿ ಸಂಖ್ಯೆಯ ಫೋನ್ ನ್ನು ನಾನು ಎರಡು ವರ್ಷಕ್ಕಿಂತ ಪೂರ್ವದಿಂದಲೇ ಉಪಯೋಗಿಸುತ್ತಿದ್ದೇನೆ ಎಂದರೇ ಸಾಕ್ಷಿಯು ಎರಡು ವರ್ಷದಿಂದ ಉಪಯೋಗಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. *1*ನೇ ಎದುರುದಾರರು ನನ್ನ ವಿರುದ್ದ ಎಂ ಸಿ ಸಂ. *3541/2016* ರಂತೆ ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾನು ಹಾಜರಾಗಿ ವಕೀಲರನ್ನು ನೇಮಿಸಿದ್ದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಸದರಿ ಅರ್ಜಿಯ ಆದೇಶ ಪುಟದಲ್ಲಿ ತನ್ನ ಸಹಿ ಇದೆ ಎಂದು ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿಆರ್-*4* ಎಂದು ಗುರುತಿಸಲಾಯಿತು. ಸದರಿ ಸಂಖ್ಯೆಯ ಫೋನ್ ನ್ನು ಪೂರ್ವದಿಂದಲೂ ಉಪಯೋಗಿಸುತ್ತಿದ್ದೆ ಎಂದರೆ ಸಾಕ್ಷಿಯು ಅದನ್ನು ಮೊದಲು ನಮ್ಮ ಕುಟುಂಬದ ಎಲ್ಲರೂ ಉಪಯೋಗಿಸುತ್ತಿದ್ದು, ಅದೇ ಸಂಖ್ಯೆವುಳ್ಳ ಫೋನ್ ನ್ನು ಉಪಯೋಗಿಸುತ್ತಿದ್ದು ಅದನ್ನು ಬಿಟ್ಟು ಬೇರೆ ಯಾವ ಸಂಖ್ಯೆ ಇರಲಿಲ್ಲ ಎಂದು ನುಡಿಯುತ್ತಾರೆ. ದಿಃ *03-04-2016* ರಂದು ನಾನು ಮಲ್ಲೇಶ್ವರಂನ ಕೆಸಿ ಜನರಲ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ನಾದುನಿ ಸುಶೀತಮ್ಮ ನನಗೆ ವಾಷಿಂಗ್ ಮೆಷಿನ್ ಪೈಪಿನಿಂದ ತಲೆಗೆ ಹೊಡೆದಿದ್ದರಿಂದ ಗಾಯಗಳಾಗಿದ್ದು, ಸದರಿ ಗಾಯಗಳಿಗೆ ಚಿಕಿತ್ಸೆ ಪಡೆದಿರುತ್ತೇನೆ. ಮೈ ಕೈಗೆ ಗಾಯಗಳಾಗಿದ್ದು, ಹೊಟ್ಟೆಗೆ ಹೊಡೆದಿದ್ದರಿಂದ ಅದರ ಬಗ್ಗೆ ಎಕ್ಸರೇ ಮಾಡಿಸಿರುತ್ತೇವೆ. ಸದರಿ ಎಕ್ಸರೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನಾನು *4*ನೇ ತಾರೀಖಿಗೆ ಆಸ್ಪತ್ರೆಗೆ ಹೋಗಿದ್ದೆ ಎಂದರೆ ಸಾಕ್ಷಿಯು ನನಗೆ ದಿನಾಂಕ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ದಿಃ *01-04-2016* ರಂದು ನನ್ನ ತಾಯಿಗೆ ಹುಷಾರಿಲ್ಲದ ಕಾರಣ ನನ್ನ ತಂದೆ ಮತ್ತು ತಮ್ಮ ಬೆಂಗಳೂರಿನ ನಮ್ಮ ಮನೆಗೆ ಬಂದಿದ್ದರು ಎಂದರೆ ಸರಿ. ನನ್ನ ತಂದೆ ಬೆಂಗಳೂರಿನ ಮಹಿಳಾ ಸಹಾಯ ವಾಣಿಗೆ ದೂರು ನೀಡಿರುವ ಬಗ್ಗೆ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ. ನಾನು ಮಹಿಳಾ ಸಹಾಯವಾಣಿಗೆ ದೂರು ನೀಡಿರುವುದಿಲ್ಲ. ನನ್ನ ತಂದೆ ಮತ್ತು ತಮ್ಮನ ಜೊತೆ ನಾನು ಬೇರೆಯವರ ಮನೆಯಲ್ಲಿ ಇದ್ದೆನು. ಆದರೆ ಅದು ಯಾವ ಊರು ಮತ್ತು ಯಾವ ಏರಿಯಾ ಎಂದು ನನಗೆ ಗೊತ್ತಿಲ್ಲ. ನಾನು ದೂರಿನಲ್ಲಿ ನನ್ನ ಚಿಕಿತ್ಸೆಗೆ *50* ಸಾವಿರ ರೂಪಾಯಿ ಖರ್ಚಾಗಿದೆ ಎಂದು ತಿಳಿಸಿದ್ದು, ಅಷ್ಟು ಮೊತ್ತದ ಚಿಕಿತ್ಸಾ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಕೆಲವೊಂದನ್ನು ಮಾತ್ರ ಹಾಜರುಪಡಿಸಿರುತ್ತೇನೆ. ನಾನು ಕೆಸಿ ಜನರಲ್ ಆಸ್ಪತ್ರೆಯಲ್ಲಿ ಒಂದು ದಿನ ಮಾತ್ರ ಚಿಕಿತ್ಸೆ ಪಡೆದಿರುತ್ತೇನೆ. ನಿಪಿ-*8* ರಲ್ಲಿ ದೇವಸ್ಥಾನ ಸಮಿತಿಯ ಮೊಹರು ಮತ್ತು ಸಹಿ ಇಲ್ಲ ಎಂದರೆ ಸರಿ. ನಿಪಿ-*8* ರಲ್ಲಿ ಹೆಚ್ಚುವರಿಯಾಗಿ ಖರ್ಚಿನ ಮೊತ್ತವನ್ನು ಸಮಿತಿಯವರು ಬರೆದಿದ್ದು, ಆ ಸಮಯದಲ್ಲಿ ನಾನು ಅಲ್ಲಿ ಇದ್ದೆನು. ನಿಪಿ-*8* ನ್ನು ಸೃಷ್ಠಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-*8* ಕ್ಕೆ ಮುಂದಿನ ಪುಟ ಇರುವ ಬಗ್ಗೆ ನನಗೆ ನೆನಪಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು

ದೇವಸ್ಥಾನದ ಸಮಿತಿಯವರು ನೀಡಿದ ರಸೀದಿಯೆಂದು ಒಪ್ಪಿದ್ದರಿಂದ ಅದನ್ನು ನಿ ಆರ್ -5 ಎಂದು ಗುರುತಿಸಲಾಯಿತು.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಪ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು, ತರೀಕೆರೆ.***